

## ಫ್ಯಾಷನ್ ಆಗಿ ಬದಲಾಗಿದೆ...

ಚಿನ್ನ ತೊಡುವುದು ಪ್ರತಿಷ್ಠೆ ಮಾತ್ರವಲ್ಲದೆ ಫ್ಯಾಷನ್ ಆಗಿಯೂ ಬದಲಾಗಿದೆ. ಯುವತಿಯರ ಅಭಿರುಚಿ ಭಿನ್ನವಾಗಿದ್ದು, ತಮ್ಮ ದಿನನಿತ್ಯದ ದಿರಿಸಿಗೂ ಹೊಂದುವಂಥ ಚಿನ್ನದ ಆಭರಣಗಳನ್ನು ಬಯಸುತ್ತಿದ್ದಾರೆ. ತೊಡಲು ಸುಲಭವಾಗುವ, ಸ್ಟೈಲ್ ಆಗಿಯೂ ಕಾಣಿಸಬಲ್ಲ, ಎಲ್ಲಾ ದಿರಿಸಿಗೂ ಒಪ್ಪುವ ವಿನ್ಯಾಸದ ಒಡವೆಗಳನ್ನು ಮೆಚ್ಚುತ್ತಿದ್ದಾರೆ. ಹೀಗಾಗಿಯೇ ಫ್ಯಾಷನಬಲ್, ಲೈಟ್ ವೇಯ್ಟ್ ಹಾಗೂ ಪ್ರತಿದಿನ ತೊಡಬಲ್ಲ (everyday wear) ಚಿನ್ನಾಭರಣಗಳ ಟ್ರೆಂಡ್ ಆರಂಭವಾಗಿದೆ.

ಟ್ರೆಂಡ್‌ಗೆ ತಕ್ಕಂತೆ ಒಡವೆಗಳ ವಿನ್ಯಾಸಗಳಲ್ಲಿಯೂ ಹೊಸತನ ಸೃಷ್ಟಿಸಲಾಗುತ್ತಿದೆ. ಚಿನ್ನ ಮಾತ್ರವಲ್ಲದೆ ಬೆಳ್ಳಿಯಲ್ಲಿಯೂ ಹಗುರವಾದ ಒಡವೆಗಳನ್ನು ರೂಪಿಸಲಾಗುತ್ತಿದೆ. ಮಾಡರ್ನ್ ದಿರಿಸುಗಳಿಗೆ ಸರಿಹೊಂದುವಂತೆ ಆಧುನಿಕ ಶೈಲಿಯ ಬೆಳ್ಳಿ, ವಜ್ರದ ಆಭರಣಗಳನ್ನು ವಿನ್ಯಾಸಗೊಳಿಸಲಾಗುತ್ತಿದೆ.

## ಮೈಕ್ರೊ ಆ್ಯಂಟಿಕ್ ಆಭರಣದ ಸೊಗಸು

‘ಆಭರಣದಲ್ಲಿ ಮೈಕ್ರೊ ಆ್ಯಂಟಿಕ್ ವಿನ್ಯಾಸ ಯುವತಿಯರು ಈ ಲೈಟ್ ವೇಯ್ಟ್ ಆಭರಣಗಳನ್ನು ಇಷ್ಟಪಡಲು ಬಹುಮುಖ್ಯ ಕಾರಣ. ಚಿನ್ನದ ಒಡವೆಗಳಲ್ಲಿ, ನೆಲಗಡಲೆ ಗಾತ್ರದಲ್ಲಿ ದೇವರ ವಿಗ್ರಹಗಳನ್ನು ಚೆಂದವಾಗಿ ವಿನ್ಯಾಸಗೊಳಿಸಬಹುದು. ಹಗುರ ವಿನ್ಯಾಸದಲ್ಲಿ ಚೆಂದವಾಗಿ ಮೂಡುವ ಈ ಒಡವೆಗಳನ್ನು ತೊಡುವುದು ಸುಲಭ. ಜೊತೆಗೆ ಎಲ್ಲ ವಯೋಮಾನದವರಿಗೂ ಹೊಂದುತ್ತದೆ. ನಿರ್ದಿಷ್ಟ ಪರಿಕಲ್ಪನೆಯೊಂದಿಗೆ ಒಡವೆಗಳನ್ನು ವಿನ್ಯಾಸಗೊಳಿಸುವುದು ಜನರು ಈ ಆಭರಣ ಮೆಚ್ಚಲು ಮತ್ತೊಂದು ಕಾರಣ. ಬೆಳ್ಳಿ ಲೋಹದಲ್ಲಿಯೂ ಆಯ್ಕೆಗಳು ಕಡಿಮೆಯಿಲ್ಲ. ಲೈಟ್‌ವೇಯ್ಟ್ ಕಿವಿಯೋಲೆ, ಲೋಲಾಕು, ಜುಮುಕಿಗಳನ್ನು ಹೆಚ್ಚು ಮಂದಿ ಖರೀದಿಸುತ್ತಿದ್ದಾರೆ. ತಾವು ತೊಡುವ ಆಭರಣ ದೊಡ್ಡದಾಗಿ ಕಾಣಬೇಕು, ಆದರೆ ಭಾರವಿರಬಾರದು ಎಂದು ಬಯಸುವವರು ಹಗುರ ಆಭರಣಗಳಿಗೆ ಮನ ಸೋಲುತ್ತಿದ್ದಾರೆ’ ಎಂದು ಮಾಹಿತಿ ನೀಡುತ್ತಾರೆ ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರಿನ ಮುಳಿಯ ಜ್ಯುವೆಲ್ಲರಿ ವರ್ತಕ ಪ್ರವೀಣ್.

‘ಒಂದು ನೆಕ್ಲೇಸ್ ಅನ್ನು ವಿನ್ಯಾಸ ಮಾಡುವುದಾದರೆ ಕನಿಷ್ಠ 8 ಗ್ರಾಂ ಚಿನ್ನ ಬೇಕಾಗುತ್ತದೆ. ಆದರೆ ವ್ಯಾಕ್ಸ್ ಅಥವಾ ಮಣಿಗಳೊಂದಿಗೆ ವಿನ್ಯಾಸ ಮಾಡಿದರೆ 23 ಗ್ರಾಂ ಚಿನ್ನದಲ್ಲಿಯೇ ಆಭರಣ ತಯಾರಿಸಲು ಸಾಧ್ಯವಿದೆ. ಕಡಿಮೆ ಬಜೆಟ್‌ನಲ್ಲಿ ಆಭರಣ ಖರೀದಿಸಲು ಯೋಚಿಸುತ್ತಿರುವವರಿಗೆ ಇದು ಖುಷಿ ನೀಡುತ್ತದೆ. ತಾವು ಅಂದುಕೊಂಡಿದ್ದಕ್ಕಿಂತ ದೊಡ್ಡದಾಗಿ, ಸುಂದರವಾಗಿ ಕಾಣುವ ಆಭರಣ ಕಡಿಮೆ ಬಜೆಟ್‌ನಲ್ಲಿಯೇ ದೊರೆತರೆ ಯಾರಿಗೆ ಖುಷಿಯಾಗುವುದಿಲ್ಲ? ಒಂದು ಆಭರಣದ ಬದಲು, ಅದೇ ಹಣಕ್ಕೆ ಎರಡು ಆಭರಣ ಕೊಳ್ಳಲೂ ಸಾಧ್ಯ. ಮದುವೆಯಂಥ ಸಮಾರಂಭಗಳಿಗೆ ಉಡುಗೊರೆ ನೀಡಲು ಕೂಡ ಇದು ಒಳ್ಳೆ ಆಯ್ಕೆ’ ಎಂಬ ವಿವರಣೆ ಅವರದ್ದು.

## ಗುಣಮಟ್ಟದಲ್ಲಿ ರಾಜಿಯಿಲ್ಲ...

ಲೈಟ್ ವೇಯ್ಟ್ ಅಂದ ಮಾತ್ರಕ್ಕೆ ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳುವಂತಿಲ್ಲ. ಬಿಐಎಸ್ ಹಾಲ್ ಮಾರ್ಕ್ ಅನ್ನು ಆದ್ಯತೆಯಾಗಿಟ್ಟುಕೊಂಡು ಭಿನ್ನ ವಿನ್ಯಾಸದ ಚಿನ್ನದೊಡವೆಗಳನ್ನು ಕೊಂಡುಕೊಳ್ಳುತ್ತಾರೆ. ದಿನೇ ದಿನೇ ಏರುತ್ತಿರುವ ಚಿನ್ನದ ಬೆಲೆಯನ್ನು ಗಮನದಲ್ಲಿಟ್ಟುಕೊಂಡು ನೋಡಿದರೆ, ಹೆಚ್ಚು ಹಣ ಸುರಿದು ತೂಕದ ಒಡವೆ ಮಾಡಿಸಿಕೊಳ್ಳುವುದಕ್ಕಿಂತ ಜೇಬಿಗೆ ಹಗುರವೆನಿಸುವ, ಚೆಂದವಾಗಿ ಕಾಣಿಸಬಲ್ಲ ಒಡವೆ ಕೊಂಡುಕೊಳ್ಳುವುದು ಲೇಸೆಂಬುದು ಜನರ ಆಲೋಚನೆಯಾಗಿದೆ.

ಚಿನ್ನದ ಮೌಲ್ಯ ಎಂದಿಗೂ ತಗ್ಗುವುದಿಲ್ಲ ಎಂದು ಚಿನ್ನದಲ್ಲಿ ಹೂಡಿಕೆ ಮಾಡುವವರಿಗೂ, ಕಡಿಮೆ ಬಜೆಟ್‌ಗೆ ಚಿನ್ನ ಖರೀದಿಯ ಯೋಜನೆ ಇಟ್ಟುಕೊಂಡಿರುವವರಿಗೂ, ಚಿನ್ನ, ಬೆಳ್ಳಿ ಒಡವೆಗಳಲ್ಲಿ ಸುಂದರವಾಗಿ ಕಾಣಬೇಕೆಂದು ಬಯಸುವ ಮಹಿಳೆಯರಿಗೂ ಈ ‘ಲೈಟ್ ವೇಯ್ಟ್ ಒಡವೆ’ಗಳು ಅತ್ಯುತ್ತಮ ಆಯ್ಕೆಯಾಗಿವೆ.

ಪ್ರತಿಕ್ರಿಯಿಸಿ: feedback@sudha.co.in

## ಸಮೀಕ್ಷೆ ಸಾಬೀತು

ಲೈಟ್ ವೇಯ್ಟ್ ಆಭರಣಗಳ ಜನಪ್ರಿಯತೆಗೆ ಇಂಬು ನೀಡುವಂತೆ ಸಮೀಕ್ಷೆಯೊಂದನ್ನು ಮೆಲೊರಾ ಸಂಸ್ಥೆ ನಡೆಸಿದೆ. ‘ಗೋಲ್ಡ್ 2.0’ ಎಂಬ ಈ ಸಮೀಕ್ಷೆಯನ್ನು, ಚಿನ್ನ ಖರೀದಿಯಲ್ಲಿ ಬದಲಾದ ಭಾರತೀಯರ ಆದ್ಯತೆಗಳನ್ನು ಅರ್ಥೈಸಿಕೊಳ್ಳಲು ನಡೆಸಲಾಗಿದೆ.

ಈ ಬಾರಿ ಅಕ್ಷಯ ತೃತೀಯದ ಪ್ರಯುಕ್ತ ಈ ಸಮೀಕ್ಷೆಯ ಫಲಿತಾಂಶವನ್ನು ಬಿಡುಗಡೆಗೊಳಿಸಲಾಗಿದ್ದು, ಭಾರತದ ಮೂವತ್ತು ನಗರಗಳಲ್ಲಿನ ಪುರುಷರು ಹಾಗೂ ಮಹಿಳೆಯರ ಅಭಿಪ್ರಾಯವನ್ನು ಸಂಗ್ರಹಿಸಲಾಗಿದೆ. 20–29 ವಯೋಮಾನದ ಶೇ.46ರಷ್ಟು ಮಂದಿ, 30–39ರ ವಯೋಮಾನದ ಶೇ.41ರಷ್ಟು ಮಂದಿಯನ್ನು ಸಮೀಕ್ಷೆಗೆ ಒಳಪಡಿಸಲಾಗಿದ್ದು, ಈ ಪೈಕಿ, ಶೇ.61ರಷ್ಟು ಮಂದಿ ಹಬ್ಬ ಹರಿದಿನಗಳಿಗೆಂದು ಚಿನ್ನ ಖರೀದಿಸುವುದು ತಮ್ಮ ಆದ್ಯತೆ ಎಂದು ತಿಳಿಸಿದ್ದಾರೆ. ಇದೇ ಸಂದರ್ಭ ಸಮೀಕ್ಷೆಗೊಳಪಟ್ಟವರಲ್ಲಿ ಶೇ.90ರಷ್ಟು ಮಂದಿ ಟ್ರೆಂಡಿ, ಫ್ಯಾಷನಬಲ್ ಆಗಿರುವ, ಜೊತೆಗೆ ವಿಶೇಷ ವಿನ್ಯಾಸದ ಲೈಟ್ ವೇಯ್ಟ್ ಚಿನ್ನಾಭರಣಗಳನ್ನು ಕೊಳ್ಳಲು ಇಚ್ಛಿಸುವುದಾಗಿ ಹೇಳಿದ್ದಾರೆ.

ಶೇ.76ರಷ್ಟು ಮಂದಿ 50 ಸಾವಿರ ರೂಪಾಯಿ ಒಳಗಿನ ಚಿನ್ನಾಭರಣ ಖರೀದಿಯ ಆಯ್ಕೆಯತ್ತ ಗಮನ ಹರಿಸುತ್ತಾರೆ ಎನ್ನುತ್ತದೆ ಈ ಸಮೀಕ್ಷೆ. ಹಗುರವಾದ ಈ ಚಿನ್ನಾಭರಣಗಳು ತಮ್ಮ ಸ್ಟೈಲ್ ಸ್ಟೇಟ್‌ಮೆಂಟ್ ಎಂದು ಯುವತಿಯರು ಹೇಳುತ್ತಿದ್ದು, ಮೆಟ್ರೊ ಸಿಟಿಗಳಲ್ಲಿ ಚಿನ್ನ ಖರೀದಿಯ ಈ ಟ್ರೆಂಡ್ ಹೆಚ್ಚಿರುವುದಾಗಿ ಸಮೀಕ್ಷೆ ತಿಳಿಸಿದೆ.